# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಸ ವಾರ್ಡ್ ಸಂಖ್ಯೆ: 176–ಸೋಮೇಶ್ವರನಗರ (ಹಳೆ ವಾರ್ಡ್–144) ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪ್ರದೀಪ್‌ಕುಮಾರ್ ಎನ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:01/10/2022 ರಂದು ಶನಿವಾರದಂದು ಬೆಳಗ್ಗೆ 10.30 ರಿಂದ 12.00 ರವರೆಗೆ ವಾರ್ಡ್ ಕಮಿಟಿ ಸಭೆಯನ್ನು ಸೋಮೇಶ್ವರನಗರ ಮುಖ್ಯ ರಸ್ತೆ, ಗಣೇಶ ದೇವಸ್ಥಾನದ ಹತ್ತಿರ ಇರುವ ಪಾಲಿಕೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಪ್ರದೀಪ್‌ಕುಮಾರ್ ಎನ್, ಸ.ಕಾ.ನಿ.ಅ (ಕೆ.ಗೌ.ನ) ಹಾಗೂ ನೋಡಲ್ ಅಧಿಕಾರಿ.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–176(144).
3. ಶ್ರೀ. ಆರ್. ರಾಘವೇಂದ್ರ, ಕಂದಾಯ ವಸೂಲಿಗಾರರು
4. ಶ್ರೀಮತಿ. ಲಕ್ಷ್ಮೀದೇವಿ ಪಿ.ಎಸ್.ಐ, ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆ.
5. ಹಾಗೂ ಸಾರ್ವಜನಿಕರಾದ ಶ್ರೀ. ಕಬೀರ್ ಕಮಲ್, ಶ್ರೀ. ಅಜ್ಮಲ್, ಶ್ರೀ. ಅಪ್ಜಲ್ (ಲಾಲ) ಹಾಗೂ ಶ್ರೀ. ಭೀಮಪ್ಪ ಎಂ.

*********

1. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು. ಅದರಂತೆ ಕಳೆದ ಸಭೆಯ ನಡವಳಿಗಳ ದೂರುಗಳನ್ನು ಪರಿಹರಿಸಲಾಗಿರುತ್ತದೆ.



Scanned with CamScanner

2. ಸಭೆಯಲ್ಲಿ ಹಾಜರಿದ್ದ ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶಗಳ ವಿಂಗಡಣೆಯಂತೆ ವಾರ್ಡ್ ಸಭೆಗಳನ್ನು ನಡೆಸಲು ಹಾಗೂ ಸದರಿ ಕಟ್ಟಡದಲ್ಲಿ ಸಮಯವನ್ನು ಹೊಂದಾಣಿಕೆ ಮಾಡಿಕೊಡು ಎರಡು ವಾರ್ಡ್‌ಗಳಾದ ಅಶೋಕ ಸ್ಥಂಭ ವಾರ್ಡ್ 175 ಮತ್ತು ಸೋಮೇಶ್ವರನಗರ ವಾರ್ಡ್ 176ರ ಸಭೆಗಳನ್ನು ನಡೆಸಲು ಕೋರಿದರು. ಈ ಹಿನ್ನೆಲೆಯಲ್ಲಿ ಅಧ್ಯಕ್ಷರು ಮಾತನಾಡಿ ಈ ತಹಲ್‌ವರೆಗೆ ಮೇಲಾಧಿಕಾರಿಗಳಿಂದ ಇಂತಹ ಯಾವುದೇ ಸುತ್ತೋಲೆಗಳು ಇರುವುದಿಲ್ಲ. ಮುಂದಿನ ಸುತ್ತೋಲೆ ಹೊರಡಿಸಿರುವ ವರೆಗೆ ಸೋಮೇಶ್ವರನಗರ 176 ವಾರ್ಡ್‌ನ ಎಲ್ಲಾ ಸಭೆಗಳನ್ನು ಸದರಿ ಕಟ್ಟಡದಲ್ಲಿಯೇ ಮುಂದುವರೆಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸರಿಯಾದ ಸಮಯಕ್ಕೆ ವಿದ್ಯುತ್‌ಚ್ಛಕ್ತಿ ಸರಬರಾಜು ಮತ್ತು ಸದರಿ ವಾರ್ಡಿನ ರಸ್ತೆಗಳಾದ ಸೋಮೇಶ್ವರನಗರ, ಕೆ.ಎಂ. ಕಾಲೋನಿಗಳಲ್ಲಿ ಸುಮಾರು 10 ವಿದ್ಯುತ್ ಕಂಬಗಳು ಹಾಳಾಗಿದ್ದು, ಬದಲಿಸಿಕೊಡುವಂತೆ ಸಾಕಷ್ಟು ಬಾರಿ ಕೋರಿದ್ದರೂ ಸಹ ಈ ತಹಲ್‌ವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಮರು ಪ್ರಸ್ತಾಪನೆ ಮಾಡಿದರು. ಬೆಸ್ಕಾಂ ಇಲಾಖೆಯ ಗೈರು ಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲಾಗುವುದೆಂದು ತಿಳಿಸಿದರು.

4. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ಸೋಮೇಶ್ವರನಗರ ಮುಖ್ಯರಸ್ತೆಯಲ್ಲಿ ಬಿದ್ದಿರುವ ಡೆಬ್ರಿಸ್ ಮತ್ತು ಘನತ್ಯಾಜ್ಯವನ್ನು ತೆರವುಗೊಳಿಸಲು ಕೋರಿದರು. ನಂತರ ಸೋಮೇಶ್ವರನಗರ ಮುಖ್ಯರಸ್ತೆಯ ಬ್ರ್ಯಾಂಡ್ ಫ್ಯಾಕ್ಟರಿ ಹತ್ತಿರ ರಸ್ತೆ ಕುಸಿದಿದ್ದು ಸರಿಪಡಿಸಲು ಕೋರಿದರು. ಸೋಮೇಶ್ವರನಗರ ಮುಖ್ಯರಸ್ತೆಯ ನಿಮ್ಹಾನ್ಸ್ ಕಾಂಪೌಂಡ್ ಹತ್ತಿರ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕೋರಿದರು. ಹಾಗೂ ಬ್ರ್ಯಾಂಡ್ ಫ್ಯಾಕ್ಟರಿ ಹತ್ತಿರ ಹೈಮಾಸ್ಕ್ ಅಳವಡಿಸಲು ಕೋರಿದರು. ಅದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆಯಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

5. ವಾರ್ಡಿನ ಸ್ಥಳೀಯರಾದ ಶ್ರೀ. ಭೀಮಪ್ಪ, ರವರು ಮಾತನಾಡಿ ಗುಲ್ಬರ್ಗ ಕಾಲೋನಿಯಲ್ಲಿ ಬಿದ್ದಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಅರಣ್ಯ ಅಧಿಕಾರಿಯವರಿಗೆ ಸೂಚಿಸುವಂತೆ ಕೋರಿದರು ಹಾಗೂ ಗುಲ್ಬರ್ಗ ಕಾಲೋನಿಯಲ್ಲಿ ಅಳವಡಿಸಿರುವ ಸಿ.ಸಿ.ಟಿವಿ ಕ್ಯಾಮರಾಗಳನ್ನು ಸರಿಪಡಿಸಲು ಕೋರಿದರು.



Scanned with CamScanner

ನಂತರ ಸದರಿ ಕಾಲೋನಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ತುಂಬಾ ವ್ಯತ್ಯಾಸ ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಸದರಿ ಪ್ರದೇಶದ ಮನೆಗಳನ್ನು ಫ್ರಿಡ್ಜ್ ವಾಷಿಂಗ್ ಮಿಷಿನ್ ಮತ್ತು ಇತರೆ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳು ದುರಸ್ಥಿಗೆ ಬಂದಿರುತ್ತವೆ ಎಂದು ತಿಳಿಸಿದರು. ಮತ್ತು ಆರ್.ಓ. ಪ್ಲಾಂಟ್ ಹತ್ತಿರ ಬಾಗಿರುವ ಟ್ರಾನ್ಸ್‌ಫಾರ್ಮರ್‌ನ್ನು ಸರಿಪಡಿಸಲು ಕೋರಿದರು. ಅದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸುವುದಾಗಿ ಸಭೆಯಲ್ಲಿ ಹೇಳಿದರು.

6. ವಾರ್ಡಿನ ಸ್ಥಳೀಯರಾದ ಶ್ರೀ. ಕಬೀರ್ ಕಮಲ್ ರವರು ಮಾತನಾಡಿ ಎಸ್.ಆರ್.ಕೆ ಗಾರ್ಡನ್‌ನಲ್ಲಿ ಬಿ.ಹೆಚ್.ಇ.ಎಲ್ ರಸ್ತೆಯಲ್ಲಿ BWSSB ಮತ್ತು OFC ಕೇಬಲ್ ನವರು ಅಳವಡಿಸಿರುವ ಛೇಂಬರ್‌ಗಳು ರಸ್ತೆಯಿಂದ ಮೇಲಕ್ಕಿದ್ದು, ವಾಹನ ಮತ್ತು ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗಿದೆ ಎಂದು ತಿಳಿಸಿದರು. ಹಾಗೂ ವಿದ್ಯುತ್ ದೀಪಗಳ ಬಗ್ಗೆ, ಪಾದಚಾರಿ ಮಾರ್ಗ ಒತ್ತುವರಿಯಾಗಿರುವ ಬಗ್ಗೆಯೂ ಸಹ ಕ್ರಮ ವಹಿಸಲು ಈ ಸಭೆಯಲ್ಲಿ ಕೋರಿದರು. ಈ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಯವರು ಮಾತನಾಡಿ ಉಪವಿಭಾಗದ ಮಟ್ಟದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಕ್ರಮ ವಹಿಸಲು ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

7. ವಾರ್ಡಿನ ಸ್ಥಳೀಯರಾದ ಶ್ರೀ. ಅಫ್ಜಲ್ ಪಾಷ (ಲಾಲ) ರವರು ಮಾತನಾಡಿ ಸೋಮೇಶ್ವರನಗರದ ಮುಖ್ಯರಸ್ತೆಯಲ್ಲಿ ಇರುವ ಸಿದ್ದಾಪುರ ಪೋಲೀಸ್ ಠಾಣೆಯಿಂದ ಇಂದಿರಾ ಕ್ಯಾಂಟೀನ್ ವರೆಗೆ ವಿದ್ಯುತ್ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ಕೂಡಲೇ ಸರಿಪಡಿಸಲು ಕೋರಿದರು. ಈ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸುವುದಾಗಿ ಸಭೆಯಲ್ಲಿ ಹೇಳಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

01/10/2022

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 176(144)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

1/10/22

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 176(144)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner